ಎರಡನೆಯದಾಗಿ ವಿಶೇಷ ಯೋಜನೆಗಳಲ್ಲಿ ಉಪಯುಕ್ತವಲ್ಲದ ಯೋಜನೆಗಳನ್ನು ರದ್ದುಪಡಿಸಿ, ಈ ವಿದ್ಯಾರ್ಥಿ ನಿಲಯಗಳಿಗೆ ಹಣವನ್ನು ಉಪಯೋಗ ಮಾಡುತ್ತೀರಾ ?

ಮೂರನೆಯದಾಗಿ, ಈ ಸಾಲಿನಲ್ಲಿ ಮಂಜೂರು ಮಾಡಿರತಕ್ಕ ವಿದ್ಯಾರ್ಥಿನಿಲಯಗಳು ಎಷ್ಟು ಎಂದು ಕೇಳಿರುವುದಕ್ಕೆ ಪ್ರಸಕ್ತ ಸಾಲಿನಲ್ಲಿ ಮೆಟ್ರಿಕ್ ನಂತರದ ಯಾವುದೇ ವಿದ್ಯಾರ್ಥಿ ನಿಲಯಗಳನ್ನೂ ಪ್ರಾರಂಭಿಸಿಲ್ಲ ಎಂದು ಹೇಳಿದ್ದಾರೆ. ಈ ಸಾಲಿನಲ್ಲಿ ಯಾವಾಗ ಪ್ರಾರಂಭ ಮಾಡುತ್ತೀರಿ, ಅದರಲ್ಲಿ ನಮ್ಮ ಮಳವಳ್ಳಿಗೆ ಪದವಿಪೂರ್ವ ವಿದ್ಯಾರ್ಥಿ ನಿಲಯವನ್ನು ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ಈ ಸಾಲಿನಲ್ಲಿ ಇದನ್ನು ಪ್ರಾರಂಭ ಮಾಡಿಸುತ್ತೀರಾ ? ಸಾಕಷ್ಟು ವಿದ್ಯಾರ್ಥಿ ನಿಲಯಗಳಿಗೆ ಸಿಬ್ಬಂದಿ ವರ್ಗವೇ ಇಲ್ಲ. ಇದು ಸರ್ಕಾರದ ಆಲೋಚನೆಯಲ್ಲಿದೆ ಎಂದು ಹೇಳಿದ್ದೀರಿ. ಇದನ್ನು ಯಾವಾಗ ಮಾಡುತ್ತೀರಿ ? ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಧರ್ಮಸಿಂಗ್:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರೀಮೆಟ್ರಿಕ್, ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಲಯಗಳನ್ನು ನಾವು ನಡೆಸುತ್ತಿದ್ದೇವೆ. ಇದರಲ್ಲಿ ಎಸ್‌ಸಿ, ಎಸ್‌ಟಿಗಳಿಗೆ ಸಂಬಂಧಪಟ್ಟಂತೆ 108 ಮತ್ತು ಬಿಸಿಎಂಗೆ ಸಂಬಂಧಪಟ್ಟಂತೆ 74 ವಿದ್ಯಾರ್ಥಿನಿಲಯಗಳೆಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತುತ ಮೆಟ್ರಿಕ್ ನಂತರ ಇರತಕ್ಕ ಹಾಸ್ಟೆಲ್ ಕಟ್ಟಡಗಳಿಗೆ ಯಾವ ರೀತಿ ಸರ್ಕಾರ ಹಣವನ್ನು ಖರ್ಚು ಮಾಡುತ್ತದೆ ಎಂದು ಕೇಳಿದ್ದಾರೆ. ಡಿಸ್ಟ್ರಿಕ್ಟ್ ಸೆಕ್ಟಾರ್ ಮತ್ತು ಸ್ಟೇಟ್ ಸೆಕ್ಟಾರ್‌ನಲ್ಲಿ ಫಂಡ್ ನೋಡಿಕೊಂಡು ಕೊಡುತ್ತಿದ್ದೇವೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಪ್ರಿ ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್‌ನಲ್ಲಿ ಬಿ.ಸಿ.ಎಂ.ಗಾಗಿ 546 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಎಸ್.ಸಿ.; ಎಸ್.ಟಿ;ಗಳಿಗೆ 864 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಹಾಸ್ಟೆಲ್ ಕಟ್ಟಡಗಳಿಗೆ 92–93ರ ಸಾಲಿನಲ್ಲಿ 1411 ಲಕ್ಷ ರೂ.ಗಳನ್ನು ಇಟ್ಟಿದ್ದೇವೆ. ಈಗಾಗಲೇ ಇದರ ಪೈಕಿ 845 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಾ ಕಡೆ ಕಟ್ಟಡಗಳನ್ನು ಕಟ್ಟಿಸುತ್ತಿದ್ದೇವೆ. ಈ ವರ್ಷ ಡಾ. ಅಂಬೇಡ್ಕರ್‌ರವರ ಶತಮಾನೋತ್ಸವದ ನೆನಪಿಗಾಗಿ 150 ಹಾಸ್ಟೆಲ್‌ಗಳನ್ನು ಕಟ್ಟಿಸಲು ಹಣವನ್ನು ಸರ್ಕಾರ ತೆಗೆದಿಟ್ಟಿದೆ.

ಮಾನ್ಯ ಸದಸ್ಯರಾದ ಶ್ರೀಮತಿ ಮಲ್ಲಾಜಮ್ಮನವರು ಹೊಸದಾಗಿ ಹಾಸ್ಟೆಲುಗಳನ್ನು ಮಂಜೂರು ಮಾಡಿದ್ದಾರೆಯೇ ಎಂದು ಕೇಳಿದ್ದಾರೆ. ಪ್ರಪೋಸಲ್ಸ್ ಅದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿದೆ. ಒಂದು ತಿಂಗಳೊಳಗಾಗಿ ಅದಕ್ಕೆ ಹಣವನ್ನು ಕೊಡುತ್ತಿದ್ದೇವೆ. ಮತ್ತೆ ಬೇರೆ ಎತ್ತು, ಬಂಡಿ, ಹರಿಜನ ಗಿರಿಜನರಿಗೆ ಸಹಾಯವಾಗಲಾರದಂಥ ಸ್ಕೀಮ್‌ಗಳಿವೆ. ಅವನ್ನು ಕೂಡ ರದ್ದುಪಡಿಸಿ, ಪರ್ಮನೆಂಟ್ ಆಗಿ ಸಹಾಯವಾಗುವಂಥ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಡಗಳಿಗೆ ಹಣವನ್ನು ಒದಗಿಸಿಕೊಡಬೇಕೆಂದು ಹೇಳಿದ್ದಾರೆ. ಅದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಮಲ್ಲಾಜಮ್ಮ:– ಮಾನ್ಯ ಅಧ್ಯಕ್ಷರೇ, ಮಳವಳ್ಳಿಗೆ ಮೆಟ್ರಿಕ್ ಹಾಸ್ಟೆಲನ್ನು ಈ ಸಾಲಿಗೆ ಓಪನ್ ಮಾಡಲು ಅವಕಾಶ ಮಾಡಿಕೊಡುತ್ತಾರೆಯೇ ಎಂದು ಕೇಳಿರುತ್ತೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀ ಧರ್ಮಸಿಂಗ್:– ಮಳವಳ್ಳಿಗೆ ಕೊಡತಕ್ಕಂಥದ್ದು, ಪರಿಶೀಲನೆಯಲ್ಲಿದೆ. ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ.

ಸರ್ಕಾರಿ ನೌಕರರ ಎರವಲು ಸೇವೆ.

349 (1616): ಶ್ರೀ ಕೆ.ಸಿ. ಮೋಡಗೇಕರ್ ದೇಸಾಯಿ (ಹಿರೇಬಾಗೇವಾಡಿ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಸರ್ಕಾರಿ ನೌಕರರಿಗೆ ತಮ್ಮ ಮಾತೃ ಇಲಾಖೆಯಿಂದ ಬೇರೆ ಇಲಾಖೆಗೆ ಎರವಲು ಸೇವೆಯ ಮೇಲೆ ಗರಿಷ್ಠ ಕಾಲಾವಧಿಯ ಬಗ್ಗೆ ನಿರ್ದಿಷ್ಟ ಪಡಿಸಿದ ಮಾರ್ಗದರ್ಶನ ಇದೆಯೇ;

ಬಿ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗರಿಷ್ಠ ಎರವಲು ಸೇವೆಯ ಅವಧಿ ಪೂರ್ಣಗೊಂಡಿರುವ ಒಟ್ಟು ಎಷ್ಟು ಸರ್ಕಾರಿ ನೌಕರರು ಇದ್ದಾರೆ;

ಸಿ) ಅಂತಹ ಸರ್ಕಾರಿ ನೌಕರರನ್ನು ಎರವಲು ಸೇವೆಯಿಂದ ಅವರ ಮಾತೃ ಇಲಾಖೆಗೆ ಮರಳಿ ಕಳುಹಿಸುವ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಎ) ಎರವಲು ಸೇವೆಯ ಮೇಲೆ ಕನಿಷ್ಠ 3 ವರ್ಷ ಗರಿಷ್ಠ 5 ವರ್ಷಗಳು.

ಬಿ) ಒಂದು

ಸಿ) ನೌಕರರನ್ನು ತಮ್ಮ ಮಾತೃ ಇಲಾಖೆಗೆ ಸಾಮಾನ್ಯ ವರ್ಗಾವಣೆಯಲ್ಲಿ ಮರಳಿ ಕಳುಹಿಸಲು ಕ್ರಮ ಕೈಗೊಳ್ಳುವಂತೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿದೆ ?

ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳನ್ನು ಪ್ರಾರಂಭಿಸಲು ಬಂದಿರುವ ಪ್ರಸ್ತಾವನೆಗಳು

315 (1832): ಶ್ರೀ ಮನೋಹರ್ ಐನಾಪುರ (ಬಳ್ಳಿಗಳ್ಳಿ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ರಾಜ್ಯದಲ್ಲಿ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳನ್ನು ಹಾಗೂ ಶಿಶು ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲಾಗುವುದೇ;

ಬಿ) ಈ ವರ್ಷ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ.

ಸಿ) ವಸತಿ ಗೃಹಗಳನ್ನು ಯಾರಿಂದ ಎಲ್ಲಿ ಪ್ರಾರಂಭಿಸಲು ಮನವಿ ಬಂದಿರುತ್ತದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಎ) ಹೌದು.

ಬಿ) ಈ ವರ್ಷದಲ್ಲಿ ಆರು ಪ್ರಸ್ತಾವನೆಗಳು ಬಂದಿರುತ್ತವೆ.

ಸಿ) ಸಂಸ್ಥೆಯ ಹೆಸರು	ಸ್ಥಳ
1. ವನಿತ ಮಿತ್ರಕೂಟ, ಕೋಲಾರ	ಕೋಲಾರ
2. ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ, ಹುನಗುಂದ, ಬಿಜಾಪುರ ಜಿಲ್ಲೆ,	ಹುನಗುಂದ
3. ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆ, ತುಮಕೂರು	ಮಧುಗಿರಿ
4. ಜಿಲ್ಲಾ ಬಣಜಾರ ವಿದ್ಯಾಸಂಸ್ಥೆ, ಬಿಜಾಪುರ	ಬಿಜಾಪುರ
5. ನಗರ ಮತ್ತು ಗ್ರಾಮಾಂತರ ಅಭಿವೃದ್ಧಿ ಸಂಘ, ಕೆ.ಜಿ.ಎಫ್	ಕೆ.ಜಿ.ಎಫ್.
6. ಚಂದ್ರಪ್ರಭಾ ಮಹಿಳಾ ಮಂಡಳಿ, ಬಿಜಾಪುರ	ಬಿಜಾಪುರ